ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE ● AFFILIATED TO BANGALORE UNIVERSITY ● AICTE APPROVED ● 2(F) & 12 (B) RECOGNITION OF UGC ● ISO 9001 2015 CERTIFIED
Electronics City PO, Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – DECEMBER 2024

## KANNADA – I SEMESTER BCA

## 24BCA11K – ಗಣಕ ಕನ್ನಡ 1

**Time: 3 Hours** **Max. Marks: 80**

**I. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (200 ಪದಗಳಿಗೆ ಮೀರದಂತೆ)** 3x10=30

1. ಕನ್ನಡ ಭಾಷೆಯು ಸರಳ ಹಾಗೂ ಸುಲಲಿತ ಎಂಬುದನ್ನು ಇಲ್ಲಿ ಹೇಗೆ ಹೇಳಲಾಗಿದೆ? ಆ ಬಗ್ಗೆ ನಿಮ್ಮ ನಿಲುವೇನು? ವಿವರಿಸಿ.
2. ಪಂಪ, ರನ್ನ, ಕುಮಾರವ್ಯಾಸ ಇವರಲ್ಲಿ ಇಬ್ಬರನ್ನು ಕುರಿತು ಟಿಪ್ಪಣಿ ಬರೆಯಿರಿ.
3. ಫೇಸ್‌ಬುಕ್, ಟ್ವಿಟರ್, ವಾಟ್ಸಪ್ ಇವುಗಳ ಬಗ್ಗೆ ಟಿಪ್ಪಣಿ ಬರೆಯಿರಿ.
4. ಮಗಳಂತಿದ್ದ ಮುಬೀನಾ ಮುಕುಂದಣ್ಣನ ಹೆಂಡತಿಯಾದದ್ದು ಹೇಗೆ ಮತ್ತು ಯಾಕೆ? ಚರ್ಚಿಸಿ.

**II. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 5x5=25

1 ಬಹು ಜನ್ಮಗಳ ಸುಕೃತ ಫಲವೆಂದು ಕವಿ ಹೇಳಲು ಕಾರಣ? ಚರ್ಚಿಸಿ.

2. ಮಗಳಂತಿದ್ದ ಮುಬೀನಾ ಮುಕುಂದಣ್ಣನ ಹೆಂಡತಿಯಾದದ್ದು ಹೇಗೆ ಮತ್ತು ಯಾಕೆ? ಚರ್ಚಿಸಿ.
3. ತತ್ಸಮಗಳು ತದ್ಭವಗಳಾಗುವ ಬಗೆಯನ್ನು ಕುರಿತು ಬರೆಯಿರಿ.
4. ಇಂಗ್ಲೀಷ್ ಭಾಷೆಯೇ ಕಂಪ್ಯೂಟರ್‌ನ ಸಂವಹನ ಭಾಷೆಯಾಗಿದೆ ಯಾಕೆ? ತಿಳಿಸಿ.
5. ಮುಸ್ತಫ ಮತ್ತು ಹುಡುಗಿಯ ಸಂಬಂಧವನ್ನು ನಿರ್ಣಯಿಸುವ ಸಂಗತಿಗಳು ಯಾವುವು? ಚರ್ಚಿಸಿ.
6. ಕನ್ನಡ ಭಾಷಾ ಮಾಧ್ಯಮದ ಬಗ್ಗೆ ನಿಮ್ಮ ಅಭಿಪ್ರಾಯವೇನು?

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಕುದುರೆ ಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಾಗಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ದುಡಿಮೆಯಿಂದ ಶಕ್ತಿಯನ್ನು ಪಡೆದು ಅದನ್ನು ದುಡಿಮೆಗೇ ವಿನಿಯೋಗಿಸುತ್ತಾ ಇರುವ ನಮ್ಮ ಅಸಂಖ್ಯ ದುಡಿಮೆಗಾರರು ಪರಾಗಸ್ಪರ್ಶಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೋ ದುಂಬಿ ಆಕಸ್ಮಿಕವಾಗಿ ತನ್ನನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಗಾಳಿಯಲ್ಲಿ ಅಲ್ಲಾಡುತ್ತಾ ಇರುವ ಹೂವಿನ ಹಾಗೆ ಇದ್ದು ಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮೀಯುತ್ತಾ, ಕಾಲ್ನಡಿಗೆಯಲ್ಲಿ ಯಾತ್ರೆ ಮಾಡುತ್ತಾ ಇರುವ ಅಪಾರ ಜನ ಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು ಬೆಂಗಳೂರು ವಿಶ್ವವಿದ್ಯಾಲಯ ಪ್ರಾಯಶಃ ಅವನನ್ನು ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ? ಹೀಗೆ ನಿತ್ಯದ ದುಡಿಮೆಯ

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU

ಕಾಯಕ ಮತ್ತು ಅಗೋಚರವಾದದ್ದರ ಭರವಸೆಯ ಈ ಜೀವನದಲ್ಲಿ ಭಾರತದ ಅಪಾರ ಜನಸಂಖ್ಯೆಗೆ ನಿಜವಾಗಿ ಸುಖ ಸಿಗುವುದು ಮಕ್ಕಳ ಪಾಲನೆ, ಲಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೇ. ಇದನ್ನು ಈ ಸಂದರ್ಭದಲ್ಲಿ ಮಾತಾಡುವುದೇ ಓದುಗರಿಗೆ ವಿಚಿತ್ರ ಅನ್ನಿಸಬಹುದು. ಆದರೆ ಬದುಕಿನ ಈ ಸ್ಥಾಯಿ ಸ್ವರೂಪವನ್ನು ಮತ್ತು ಅದರ ಸಂಚಾರೀ ಕನಸುಗಳನ್ನು, ಭರವಸೆಗಳನ್ನು ಹೃದಯದಲ್ಲಿ ಅರಿತು ದುಡಿಯುವವರಿಗೆ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಈಚಿನ ಅನೇಕ ಯೋಜನೆಗಳು ಕ್ರಿಮಿನಲ್ ವಿಚಾರವಾಗಿ ಭಾಸವಾಗುತ್ತದೆ. ವೇಗವಾಗಿ ಹೋಗುವ ಕಾರುಗಳಿಗಾಗಿ ನಾವು ಮಾಡುವ ರಸ್ತೆಗಳನ್ನು ಕಂಡಾಗ ಒಬ್ಬ ಮುದುಕ, ಮುದುಕಿ ಅಥವಾ ಒಂದು ಮಗು ರಸ್ತೆಯ ಈ ಬದಿಯಿಂದ ಇನ್ನೊಂದು ಬದಿಗೆ ಹೋಗುವುದೇ ಅಸಾಧ್ಯವಲ್ಲವೇ ಅನ್ನುವ ಸಂಕಟ ಉಂಟಾದರೆ ನಾವು ಮನುಷ್ಯರು. ಬದಲಾಗಿ ಎಷ್ಟು ವೇಗವಾಗಿ ಒಂದು ಕಾರು ಸಂಚರಿಸಬಲ್ಲದು ಎಂದು ಯೋಚಿಸಿದರೆ ನಾವು ರಾಕ್ಷಸರು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** **2x1=2**

**V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ.** **2x2=4**

1. ಕುಗ್ರಾಮ 2. ಆಕಾಶ 3. ಯಂತ್ರ ಭಾಷೆ 4. ದರ್ಪಣ

**VI. ವರ್ಗಾವಣೆ ಪತ್ರ ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೊಂದು ಅರ್ಜಿ ಬರೆಯಿರಿ.** **1x5=5**

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** **4x1=4**

1. ಮೋಳೆ 2. ಶೂಲಧರ 3. ಬಧಿರ
4. ಬಾಂದಳ 5. ವಾತ್ಸಲ್ಯ 6. ಪಾತಕ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **5x1=5**

1) ಗಂಡಸರು ಕಥೆಯ ಲೇಖಕಿಯ ಹೆಸರೇನು?

ಅ) ವಸುಂದರ ಭೂಪತಿ ಆ) ವೀಣಾ ಶಾಂತೇಶ್ವರ ಇ) ಚೆನ್ನವೀರ ಕಣವಿ ಈ) ವಸುದೇಂದ್ರ

2) ಲೆಟರ್ ರೈಟಿಂಗ್ ಕಲಿಸಿದ ಮೇಷ್ಟ್ರು ಯಾರು?

ಅ) ಶಂಕರ್ ಸರ್ ಆ) ಪಾಟೀಲ್ ಸರ್ ಇ) ಪಾಟೀಲ್ ಪುಟ್ಟಪ್ಪ ಈ) ರಾಮು ಸರ್

3) ಬೇಬಿಯ ಮೂಲ ಹೆಸರೇನು?

ಅ) ಫಾತಿಮಾ ಆ) ಮೇಘನಾ ಇ) ಬೇಬಿಜಾನ್ ಈ) ಮುಬೀನಾ

4) ಸುನೀತದಲ್ಲಿ ಎಷ್ಟು ಸಾಲುಗಳಿರುತ್ತವೆ?

ಅ) 18 ಆ) 16 ಇ) 14 ಈ) 12

5) ಜಗತ್ತಿನ 6,000 ಭಾಷೆಗಳಲ್ಲಿ ಜೀವಂತಿಕೆಯ ದೃಷ್ಟಿಯಲ್ಲಿ ಕನ್ನಡ ಭಾಷೆಯ ಸ್ಥಾನ ಎಷ್ಟನೆಯದು?

ಅ) 15 ಆ) 20 ಇ) 25 ಈ) 30

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY BENGALURU